

## ವೈಯಾಪ್ರೊಟೆಕ್ಟ್




ಐಫೋನ್‌ನ ಈ ಆ್ಯಪ್‌ನಿಂದ ನಿಮ್ಮ ಫೋನ್ ಭದ್ರತೆಗೆ ಸಲಹೆಗಳು ಸಿಗುತ್ತವೆ. ಆ್ಯಪ್‌ಗಳು ನೋಡಲು, ಬಳಸಲು ಖುಷಿ. ಆದರೆ ಅವು ಆ್ಯಪ್ ಡೆವಲಪರ್‌ಗೆ ಅಥವಾ ಜಾಹೀರಾತುದಾರರಿಗೆ ಕೆಲವೊಂದು ಮಾಹಿತಿ ಕಳಿಸಿದರೆ ನಮಗೆ ಗೊತ್ತಾಗುವುದಾದರೂ ಹೇಗೆ? ಹೀಗಾಗಿ ವೈಯಾಪ್ರೊಟೆಕ್ಟ್ ಆ್ಯಪ್ ಈ ಮಾಹಿತಿಗಳ ಬಗ್ಗೆ ನಿಮಗೆ ತಿಳಿವಳಿಕೆ ನೀಡುತ್ತದೆ. ಯಾವ ಆ್ಯಪ್ ಯಾವ ಕಂಪೆನಿ ಜೊತೆ ಸಂಪರ್ಕ ಸಾಧಿಸಿದೆ, ನಿಮ್ಮ ಅಮೂಲ್ಯ ಮಾಹಿತಿ ಎಲ್ಲಿಗೆ ರವಾನೆಯಾಗುತ್ತಿದೆ ಎಂಬುದು ಗೊತ್ತಾಗುತ್ತದೆ. ಈ ಮೂಲಕ ನಿಮ್ಮ ಫೋನ್‌ನ ಭದ್ರತೆಯನ್ನು ಹೇಗೆ ಸಾಧಿಸಬಹುದು ಎಂಬು ಸಲಹೆಗಳನ್ನು ಈ ಆ್ಯಪ್ ನೀಡುತ್ತದೆ.

## ಕ್ರಿಪ್ಟೋಕ್ಯಾಟ್




ಸುಲಭವಾಗಿ ಚ್ಯಾಟ್ ಮಾಡಬಹುದು. ಬೇರೆಯವರು ಕಂಡು ಹಿಡಿಯಲು ಸಾಧ್ಯವಿಲ್ಲ. ಸುಲಭವಾಗಿ ಅಳಿಸಿ ಹಾಕಬಹುದು. ಮಾತನಾಡುವಾಗ ಬೇರೆಯವರು ಕೇಳಿಸಿಕೊಂಡರೆ ಎನ್ನುವ ಭಯ ಇರುವವರು ಈ ಸರಳ ಚ್ಯಾಟಿಂಗ್ ಇಂಟರ್‌ಫೇಸ್ ಬಳಸಬಹುದು. ಇದು ಐಫೋನ್‌ಗೆ ಉಚಿತ. ಇದರಲ್ಲಿ ಅಕೌಂಟ್ ಸೃಷ್ಟಿಸಲು ಜಾಗವಿಲ್ಲ. ಹೀಗಾಗಿ ಬೇರೆಯವರು ಹ್ಯಾಕ್ ಮಾಡುವ ಸಾಧ್ಯತೆಯೂ ಇಲ್ಲ. ಎರಡು ಖಾಲಿ ಜಾಗಗಳಿದ್ದು, ಬಳಕೆದಾರರ ಅಡ್ಡ ಹೆಸರು ಹಾಗೂ ಯಾರ ಜೊತೆ ಚ್ಯಾಟ್ ಮಾಡುತ್ತೇವೋ ಅವರ ಅಡ್ಡ ಹೆಸರನ್ನು ಟೈಪಿಸಬಹುದು. ಆದರೆ ಇನ್ನೊಬ್ಬ ಬಳಕೆದಾರ ಅದೇ ಅಡ್ಡ ಹೆಸರು ಬಳಸಿದರೆ ಆ ಚ್ಯಾಟ್ ಗ್ರೂಪ್‌ನೊಳಗೆ ಸೇರಿಕೊಂಡು ಬಿಡುವ ಸಾಧ್ಯತೆ ಇದೆ. ಚ್ಯಾಟ್‌ಗೆ ನೀಲಿ ಹಿನ್ನೆಲೆಯಲ್ಲಿ ಗುಳ್ಳೆಗಳು ಮೂಡುತ್ತವೆ. ಸಂದೇಶ ಕಳಿಸಿದ ನಂತರ ಇನ್ನೊಂದು ಕಡೆಯವರು ಟೈಪ್ ಮಾಡುವಾಗ ಕಾಣಿಸುತ್ತದೆ.


## ಫೋಲ್ಡ್ಸ್ ಆ್ಯಂಡ್ ಫಾಲ್ಟ್ಸ್ ಎಚ್‌ಡಿ



ಇದು ಐಪ್ಯಾಡ್‌ನ ಭೂಗರ್ಭಶಾಸ್ತ್ರ ಆ್ಯಪ್ ಆಗಿದ್ದು ಒತ್ತಡದಲ್ಲಿ ಕಲ್ಲು ಬಂಡೆಯ ಸ್ಥಿತಿಯನ್ನು ಚಿತ್ರ, ಗ್ರಾಫ್ ಹಾಗೂ ಅನಿಮೇಶನ್ ಮೂಲಕ ವಿವರಿಸುತ್ತದೆ. ವಿವರಣೆ ಸ್ಪಷ್ಟವಾಗಿದ್ದು ಕಲ್ಲು ಬಂಡೆಯಲ್ಲಿರುವ ಏಳು ಮಡಿಕೆಗಳನ್ನು ಅನಿಮೇಶನ್ ತೋರಿಸುತ್ತದೆ. ಫೋಲ್ಡ್ಸ್ ವಿಭಾಗಕ್ಕೆ ಹೋಗಿ ಬೆರಳಿನಿಂದ ಕುಟ್ಟಿ. ಸರಳವಾದ ಕಲ್ಲೊಂದು ಹೆಚ್ಚಿನ ಒತ್ತಡ ಬಿದ್ದಾಗ ಹೇಗೆ ಮಡಿಕೆಗಳಾಗಿ ಆಕಾರವನ್ನು ಬದಲಾಯಿಸಿಕೊಳ್ಳುತ್ತದೆ ಎಂಬುದು ನಿಮ್ಮ ಕಣ್ಣುಂದೆ ಗೋಚರಿಸುತ್ತದೆ. ಫಾಲ್ಟ್ಸ್‌ನಲ್ಲಿ ಒತ್ತಡ ಮತ್ತು ಬಲ ಬಿದ್ದಾಗ ಕಲ್ಲು ಬಂಡೆ ಒಡೆದು ಅಥವಾ ಬಿರುಕು ಬಿಡುವುದನ್ನು ನೋಡಬಹುದು. ಕಲ್ಲು ಹಾಗೇ ಬೆಳೆಯುವುದನ್ನೂ ನೀವು ವೀಕ್ಷಿಸಬಹುದು. ಇದು ಭೂಗರ್ಭಶಾಸ್ತ್ರ ವಿದ್ಯಾರ್ಥಿಗಳಿಗೆ ಅನುಕೂಲಕರವಾದ ಆ್ಯಪ್.

## ಸ್ಯಾಮ್ಸಂಗ್ ಮಿಲ್ಕ್ ಮ್ಯೂಸಿಕ್

ಸ್ಯಾಮ್ಸಂಗ್ ಗ್ಯಾಲಕ್ಸಿ ಫೋನ್‌ನ ಈ ಆ್ಯಪ್ ಉತ್ತಮ ಆಡಿಯೋ ಗುಣಮಟ್ಟ ಹೊಂದಿದ್ದು ಜಾಹೀರಾತುಗಳು ಕಿರಿಕಿರಿ ಇಲ್ಲ. ಸಂಪೂರ್ಣ ಉಚಿತ ಆ್ಯಪ್. 200ಕ್ಕೂ ಅಧಿಕ ಸ್ಟೇಶನ್‌ಗಳ ಮೂಲಕ 13 ದಶಲಕ್ಷ ಹಾಡುಗಳು ಹಾಗೂ ಹಾಸ್ಯ ಲಹರಿಯನ್ನು ಹರಿಯಬಿಡುತ್ತದೆ. ಆದರೆ ಪ್ಲೇಲಿಸ್ಟ್ ಸೃಷ್ಟಿಸಲು ಸಾಧ್ಯವಿಲ್ಲ. ನಿಮ್ಮ ನೆಚ್ಚಿನ ಗಾಯಕನ ಹೆಸರಲ್ಲಿ ಸ್ಟೇಶನ್ ಸೃಷ್ಟಿಸಬಹುದು.




■ ಎಸ್. ತುಂಬೆ